923(1215) ಶ್ರೀ ನರೇಂದ್ರಬಾಬು ನೆ ಲ (ರಾಜಾಜಿನಗರ) ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಉಗ್ರಗಾಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸಂಘ ಸಂಸ್ಥೆಗಳು ಯಾವುವು,

ಆ) ಕೇಂದ್ರ ಮತ್ತು ರಾಜ್ಯದ ಕಾನೂನು ಚೌಕಟ್ಟಿನಲ್ಲಿ ನಿಗದಿಸಲ್ಪಟ್ಟಿರುವ ಸಂಸ್ಥೆಗಳು ಯಾವುವು (ವಿವರಗಳನ್ನು ಒದಗಿಸುವುದು),

ಇ) ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವವರನ್ನು ನಿಗ್ರಹಿಸಲು ಸರ್ಕಾರ ಯಾವ ಯಾವ ಯೋಜನೆಗಳನ್ನು ರೂಪಿಸಿಕೊಂಡಿದೆ ಹಾಗೂ ಇಲ್ಲಿಯವರೆಗೂ ಬಂಧಿಸಲಾದವರ ಸಂಖ್ಯೆ ಎಷ್ಟು,

ಈ) ಉಗ್ರಗಾಮಿಗಳಿಂದ ಯಾವ ಯಾವ ರೀತಿಯ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ,

ಉ) ಪಶ್ಚಿಮ ಘಟ್ಟಗಳಲ್ಲಿ ನಕ್ಸಲೀಯರ ಚಟುವಟಿಕೆಗಳನ್ನು ನಿಯಂತ್ರಿಸಲು ಹಾಗೂ ನಕ್ಸಲೀಯರನ್ನು ಮುಖ್ಯವಾಹಿನಿಗೆ ತರಲು ಕ್ರಮಬದ್ಧ ಯೋಜನೆಗಳು ಯಾವುವು,

ಊ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಬಂಧಿಸಲ್ಪಟ್ಟ ನಕ್ಸಲೀಯರ ಸಂಖ್ಯೆ ಎಷ್ಟು,

ಋ) ಪೊಲೀಸ್ ಮತ್ತು ನಕ್ಸಲೀಯರ ನಡುವೆ ನಡೆದ ಸಂಘರ್ಷದಲ್ಲಿ ಮೃತಪಟ್ಟ ಪೊಲೀಸ್ ಸಿಬ್ಬಂದಿ ಎಷ್ಟು,

ಎ) ಮೃತಪಟ್ಟ ಪೊಲೀಸ್ ಸಿಬ್ಬಂದಿಯವರಿಗೆ ಇಲ್ಲಿಯವರೆಗೆ ಎಷ್ಟು ಪರಿಹಾರಧನ ನೀಡಲಾಗಿದೆ,

ಏ) ಇವರ ಚಟುವಟಿಕೆಗಳನ್ನು ನಿಲ್ಲಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಎಲ್ ಇ ಟಿ ಆಲ್-ಬದರ್, ಅಹಲೆ ಹದಿ ಮತ್ತು ಸಿಮಿ ಉಗ್ರಗಾಮಿ ಚಟುವಟಿಕೆಗಳಲ್ಲಿ ತೊಡಗಿರುತ್ತವೆ

ಆ) ಕೇಂದ್ರ ಸರ್ಕಾರವು ಕಾನೂನು ಚೌಕಟ್ಟಿನಲ್ಲಿ ಈ ಕೆಳಕಂಡ 32 ಸಂಸ್ಥೆಗಳು ನಿಷೇಧಿಸಲ್ಪಟ್ಟಿವೆ

1) ಬಾಬರ್ ಕಲ್ಸ ಇಂಟರ್ ನ್ಯಾಷನಲ್
2) ಖಲಿಸ್ತಾನ್ ಕಮಾಂಡೋ ಫೋರ್ಸ್
3) ಖಲಿಸ್ತಾನ್ ಜಿಂದಾಬಾದ್ ಫೋರ್ಸ್
4) ಇಂಟರ್ ನ್ಯಾಷನಲ್ ಸಿಖ್ ಯೂತ್ ಫೆಡರೇಷನ್ 5) ಲಷ್ಕರ್ –ಎ–ತೋಯಿಬಾ ವಾನ್ಫಾನ್–ಇ–ಅಹ್ಲಿ ಅದೀಸ್ 6) ಜೈಶ್ ಎ–ಮೊಹಮ್ಮದ್– ತಾರೀಖ್–ಇ ಪುರ್ಕಾನ್ 7) ಹರ್ಕತ್ ಉಲ್ಲಾ ಮುಜಾಹಿದ್ದೀನ್/ಹರ್ಕತ್–ವುಲ್ ಅನ್ಸರ್/ಹರ್ಕತ್ ಉಲ್ ಜಿಹಾಧ್ ಇ ಇಸ್ಲಾಂಮಿ 8) ಹಿಜಿಬ್ ಉಲ್ ಮುಜಾಹಿದ್ದೀನ್/ಹಿಜಿಬ್ ಉಲ್ ಮುಹಾಹಿದ್ದೀನ್ ಪಿರ್ ಪಚಿಜಾಲ್ ರೆಜಿಮೆಂಟ್ 9) ಅಲ್ ಉಮ್ಮರ್ ಮುಜಾಹಿದ್ದೀನ್ 10) ಜಮ್ಮು ಅಂಡ್ ಕಾಶ್ಮೀರ ಇಸ್ಲಾಮಿಕ್ ಪ್ರಂಟ್ 11) ಯುನೈಟೆಡ್ ಲಿಬರೇಷನ್ ಫ್ರಂಟ್ ಆಫ್ ಅಸ್ಸಾಂ 12) ನ್ಯಾಷನಲ್ ಡೆಮಾಕ್ರಾಟಿಕ್ ಫ್ರಂಟ್ ಆಫ್ ಬೋಡೋ ಲ್ಯಾಂಡ್ 13) ಪೀಪಲ್ಸ್ ಲಿಬರೇಷನ್ ಆರ್ಮಿ 14) ಯುನೈಟೆಡ್ ನ್ಯಾಷನಲ್ ಲಿಬರಲೇಷನ್ ಫ್ರಂಟ್ 15) ಪೀಪಲ್ಸ್ ರೆವಲ್ಯೂಷನರಿ ಪಾರ್ಟಿ ಆಫ್ ಕಾಂಗ್ಲಿ ಪಾಕ್ 16) ಕಾಂಗ್ಲಿ ಪಾಕ್ ಕಮ್ಯುನಿಸ್ಟ್ ಪಾರ್ಟಿ 17) ಕಾಂಗ್ಲಿ ಯೋಲ್ ಕಾನ್ಬ್ಲುಪ್ 18) ಮಣಿಪುರ ಪೀಪಲ್ಸ್ ಲಿಬರೇಷನ್ ಫ್ರಂಟ್ 19) ಅಲ್ ತ್ರಿಪುರ, ಟೈಗರ್ ಫೋರ್ಸ್ 20) ನ್ಯಾಷನಲ್ ಲಿಬರೇಷನ್ ಫ್ರಂಟ್ ಆಫ್ ತ್ರಿಪುರ 21) ಲಿಬರೇಷನ್ ಟೈಗರ್ಸ್ ಆಫ್ ತಮಿಳು ಇಳಂ 22) ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ 23) ದೀನ್‌ದಾರ್ ಅಂಜುಮನ್ 24) ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕಿನ್ಸ್ಟ್–ಲೆನಿನ್ಸ್ಟ್) ಪೀಪಲ್ಸ್ ವಾರ್ ಮತ್ತು ಸಹ ಸಂಘಟನೆಗಳು 25) ಮಾವೋಯಿಸ್ಟ್ ಕಮ್ಯುನಿಸ್ಟ್ ಸೆಂಟರ್ (ಎಂ ಸಿ ಸಿ) ಮತ್ತು ಸಹ ಸಂಘಟನೆಗಳು 26) ಅಲ್ ಬದರ್ 27) ಜಮಾತ್ ಉಲ್ ಮುಜಾಹಿದ್ದೀನ್ 28) ಆಲ್‌ಖೈದ 29) ದುಖ್ತಾರನ್ ಇ ಮಿಲಾಟ್ 30) ತಮಿಳುನಾಡು ಲಿಬರೇಷನ್ ಆರ್ಮಿ 31) ತಮಿಳು ನ್ಯಾಷನಲ್ ರಿಟ್ರೈವಲ್ ಟ್ರೂಪ್ಸ್ 32) ಅಖಿಲ ಭಾರತ ನೇಪಾಳ ಏಕ್ಸಾತ್ ಸಮಾಜ

ಇ) 1) ರಾಜ್ಯದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ಹತ್ತಿಕ್ಕಲು ರಾಜ್ಯ ಮಟ್ಟದಲ್ಲಿ ಈಗಾಗಲೇ ಐ ಜಿ ಪಿ ರವರ ನೇತೃತ್ವದಲ್ಲಿ ಉಗ್ರಗಾಮಿ ನಿಗ್ರಹ ದಳ ಕಾರ್ಯ ನಿರ್ವಹಿಸುತ್ತಿವೆ ಈ ಪಡೆಯ ಬಲವರ್ಧನೆಗಾಗಿ ಎಸ್ ಪಿ 2, ಡಿ ಎಸ್ ಪಿ 3 ಪಿಐ, 40 ಪೇದೆಗಳು, 6 ಮಹಿಳಾ ಪೇದೆಗಳು, 10 ಎಪಿಸಿ ವಾಹನ ಚಾಲಕ ಹುದ್ದೆಗಳನ್ನು ಹೊಸದಾಗಿ ಸೃಜಿಸಲಾಗಿದೆ

2) ಮುನಿರಾಬಾದ್ ಬಳಿ ಐ ಆರ್ ಪಡೆಯನ್ನು ರಚಿಸಲು ಶಿಲಾನ್ಯಾಸ ಮಾಡಲಾಗಿದೆ

ಇಲ್ಲಿಯವರೆಗೂ ವಿವಿದ ಭಯೋತ್ಪಾದನಾ ಸಂಘಗಳಿಗೆ ಸೇರಿದ 48 ಜನ ಉಗ್ರರನ್ನು ಬಂಧಿಸಲಾಗಿದೆ

ಈ) ಉಗ್ರಗಾಮಿಗಳಿಂದ ಈ ಕೆಳಕಂಡ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ

1) 7 ಎ ಕೆ 47 ಬಂದೂಕುಗಳು
2) 5 ಎ ಕೆ 47 ಮ್ಯಾಗ್‌ಜೆನ್‌ಗಳು
3) 695 ಎ ಕೆ 47 ಜೀವಂತ ಗುಂಡುಗಳು
4) ಒಂದು ಸ್ವದೇಶಿ ರಿವಾಲ್ವರ್ ಮತ್ತು 2 ಗುಂಡುಗಳು
5) ಒಂದು ರಿವಾಲ್ವರ್
6) ಒಂದು ಸ್ವದೇಶಿ ಪಿಸ್ತೂಲು
7) ಒಂದು ಸ್ವದೇಶಿ ಶಸ್ತ್ರ
8) ಒಂದು 12 ಬೋರ್ ಬಂದೂಕು
9) 3 ನವೀಕೃತ ಗನ್ನುಗಳು
10) 2 ಸಬ್‌ಮಿಷನ್ ಮ್ಯಾಗ್‌ಜೆನ್‌ಗಳು
11) ಎರಡು 9 ಎಂ ಎಂ ಪಿಸ್ತೂಲು ಮತ್ತು 3 ಗುಂಡುಗಳು
12) 12 ಗ್ರೆನೇಡ್‌ಗಳು
13) 1219 ಎಲೆಕ್ಟ್ರಿಕಲ್ ಡಿಟೋನೇಟರ್ಸ್
14) 970 ಸಾಧಾರಣ ಡಿಟೋನೇಟರ್ಸ್
15) 2 ಟನ್ ಬಾಂಬ್‌ಗಳು
16) 13 ಪೈಪ್ ಬಾಂಬ್ ಸೆಲ್‌ಗಳು
17) 6 ಅಲ್ಯುಮಿನಿಂ ಹ್ಯಾಂಡ್ ಶೆಲ್‌ಗಳು
18) 3 ಐರನ್ ಹ್ಯಾಂಡ್ ಶೆಲ್‌ಗಳು
19) 1 ಬ್ರಾನ್ ಹ್ಯಾಂಡ್ ಗ್ರೇನೇಡ್ ಶೆಲ್‌ಗಳು
20) 6 ಕೈ ಬಾಂಬ್‌ಗಳು
21) 10 ಮೀಟರ್ ಫ್ಯೂನ್ ವಯರ್
22) ಅಮೋನಿಯಂ ನೈಟ್ರೇಟ್ ಮತ್ತು ಪೊಟಾಶಿಯಂ ನೈಟ್ರೇಟ್ ರಾಸಾಯನಿಕಗಳು

23) 1 ಟಿಫನ್ ಬಾಕ್ಸ್ ಬಾಂಬ್

24) 114 ಕಬ್ಬಿಣದ ಪಿಲ್ಲೇಟ್ಸ್

ಊ) ಪಶ್ಚಿಮ ಘಟ್ಟಗಳಲ್ಲಿ ನಕ್ಸಲೀಯ ಚಟುವಟಿಕೆಗಳನ್ನು ನಿಯಂತ್ರಿಸಲು ಸರ್ಕಾರವು ಎ ಎನ್ ಎಫ್ ಪಡೆಯನ್ನು ರಚಿಸಿದ್ದು, ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ಪೊಲೀಸ್ ಅಧೀಕ್ಷಕರ ಅಧೀನದಲ್ಲಿ ಎ ಎನ್ ಎಫ್ ನ್ನು ರಚಿಸಿ ಆಯಾ ಜಿಲ್ಲೆಗಳ ಎಸ್ ಪಿ ಗಳ ನೇತೃತ್ವದಲ್ಲಿ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ

ಈ ಕೆಳಕಂಡ ಯೋಜನೆಗಳು ಜಾರಿಯಲ್ಲಿವೆ

1) ಪಶ್ಚಿಮ ಘಟ್ಟದಲ್ಲಿ ನಕ್ಸಲೀಯರನ್ನು ಮುಖ್ಯ ವಾಹಿನಿಗೆ ತರಲು ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಹಾಗೂ ಬುಡಕಟ್ಟು ಯುವಕರಿಗೆ ಕರ್ನಾಟಕ ರಾಜ್ಯ ಪೊಲೀಸ್ ಹೌಸಿಂಗ್ ಕಾರ್ಪೋರೇಷನ್ ಆಗುಂಬೆಯಲ್ಲಿ ಕೊಡಲಾಗುತ್ತಿದೆ 2004ರಿಂದ 2007ರ (ಜನವರಿ)ವರೆಗೆ 240 ಯುವಕರಿಗೆ ವೃತ್ತಿಪರ ತರಬೇತಿ ಕೊಡಲಾಗಿದೆ

ಈ ಬಗ್ಗೆ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ

ಅಭಿವೃದ್ಧಿ ಯೋಜನೆಗಳ ಬಗ್ಗೆ ವಿವರವನ್ನು ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆರವರಿಂದ ಪಡೆಯಲು ಕೋರಲಾಗಿದೆ

ಊ) ರಾಜ್ಯದಲ್ಲಿ 3 ವರ್ಷಗಳಿಂದ 84 ನಕ್ಸಲೀಯರುಗಳನ್ನು ಬಂಧಿಸಲಾಗಿದೆ

ಋ) ನಕ್ಸಲೀಯರ ಮತ್ತು ಪೊಲೀಸ್‌ರ ನಡುವೆ ನಡೆದ ಸಂಘರ್ಷದಲ್ಲಿ 7 ಜನ ಪೊಲೀಸ್ ಸಿಬ್ಬಂದಿಗಳು ಮೃತಪಟ್ಟಿರುತ್ತದೆ

ಎ) ಮೃತಪಟ್ಟ ಪೊಲೀಸ್ ಸಿಬ್ಬಂದಿಯವರ ಕುಟುಂಬದವರಿಗೆ ತಲಾ 5 ಲಕ್ಷ ರೂ ಪರಿಹಾರ ಧನವನ್ನು ಹಾಗೂ ಇತರೆ ಸಲ್ಲಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ ವಿವರವಾದ ಪಟ್ಟಿಯನ್ನು ಲಗತ್ತಿಸಿದೆ

ಏ) ರಾಜ್ಯದಲ್ಲಿ ನಕ್ಸಲ್ ಚಟುವಟಿಕೆಗಳನ್ನು ನಿಲ್ಲಿಸಲು ಸರ್ಕಾರವು ಎ ಎನ್ ಎಫ್ ದಳವನ್ನು ರಚಿಸಿರುತ್ತದೆ ಪ್ರಸ್ತುತ ಪ್ರಮುಖ ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ಪೊಲೀಸ್ ಅಧೀಕ್ಷಕರ ಅಧೀನದಲ್ಲಿ ಎ ಎನ್ ಎಫ್ ತುಕಡಿಗಳನ್ನು ಕೋಂಬಿಂಗ್ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ

925 (1217) ಶ್ರೀ ನರೇಂದ್ರಬಾಬು ನೆ ಲ (ರಾಜಾಜಿನಗರ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದಲ್ಲಿರುವ ಕೇಂದ್ರ ಪುರಾತತ್ವ ಇಲಾಖೆ ಮತ್ತು ರಾಜ್ಯ ಪ್ರವಾಸೋದ್ಯಮ ಇಲಾಖೆ ವತಿಯಿಂದ ಗುರುತಿಸಲ್ಪಟ್ಟ ಪ್ರವಾಸಿ ಕೇಂದ್ರಗಳು ಯಾವುವು,

ಆ) ಇವುಗಳ ಮರೋಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಮೊತ್ತ ಎಷ್ಟು (ಕಳೆದ 3 ವರ್ಷಗಳ ವಿವರ ನೀಡುವುದು,

ಇ) ಪ್ರವಾಸಿ ಕೇಂದ್ರಗಳಲ್ಲಿ ಅವ್ಯವಹಾರಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಇವುಗಳನ್ನು ನಿಯಂತ್ರಿಸಲು ತೆಗೆದುಕೊಂಡಿರುವ ಕ್ರಮಗಳಾವುವು,

ಉ) ಹೆಚ್ಚು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಲು ತೆಗೆದುಕೊಂಡ ಪೂರ್ವಭಾವಿ ಯೋಜನೆಗಳು ಯಾವುವು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಕೇಂದ್ರ ಪುರಾತತ್ವ ಇಲಾಖೆಯಿಂದ ಕರ್ನಾಟಕದಲ್ಲಿ ಸುಮಾರು 608 ಸಂರಕ್ಷಿತ ಸ್ಮಾರಕಗಳನ್ನು (ದೇವಸ್ಥಾನಗಳು, ಕೋಟೆಗಳು, ಅರಮನೆಗಳು ಮಸೀದಿಗಳು ಹಾಗೂ ವಿಶ್ವ ಪರಂಪರೆಯ ಹಂಪೆಯನ್ನು ಒಳಗೊಂಡಂತೆ) ಗುರುತಿಸಲಾಗಿದೆ ರಾಜ್ಯ ಪ್ರವಾಸೋದ್ಯಮ ಇಲಾಖೆಯು ಗುರುತಿಸಿರುವ ಪ್ರವಾಸಿ ಕೇಂದ್ರಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ

ಆ) ಅ) ಇವುಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ರಾಜ್ಯದಿಂದ ಬಿಡುಗಡೆಯಾದ ಅನುದಾನ ಹೀಗಿವೆ

1) 2003–04ರಲ್ಲಿ 1650 00 ಲಕ್ಷಗಳು
2) 2004–05ರಲ್ಲಿ 5604 00 ಲಕ್ಷಗಳು
3) 2005–06ರಲ್ಲಿ 3123 77 ಲಕ್ಷಗಳು